**<u>ದಿ : 31-07-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆ</u>:- <u>ಅರ್ಜಿದಾರರ ಪರ ವಕೀಲರಿಂದ</u>**

1) ಘಟನೆಗೆ ಸಂಬಂಧಿಸಿದ ಪ್ರಥಮ ವರ್ತಮಾನ / ದೂರು
2) ಆಸ್ಪತ್ರೆಗೆ ದಾಖಲಾದ ನಂತರ ವೈದ್ಯರು ಪೊಲೀಸರಿಗೆ ಕಳುಹಿಸಿದ ಎಂ.ಎಲ್.ಸಿ ಸೂಚನಾ ಪತ್ರ
3) ಘಟನೆಯಲ್ಲಿ ಆದ ಗಾಯಗಳಿಗೆ ಸಂಬಂಧಿಸಿದಂತೆ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಬಿಡುಗಡೆ ಹೊಂದಿರುವ ಬಗ್ಗೆ **1 ಬಿಡುಗಡೆಯ ಸಾರಾಂಶಗಳು**
4) ಚಿಕಿತ್ಸೆಗಾಗಿ ಹಣವನ್ನು ಖರ್ಚು ಮಾಡಿದ ಬಗ್ಗೆ ಒಟ್ಟು **35 ಬಿಲ್ಲುಗಳು** ಮತ್ತು ರಶೀದಿಗಳು
5) ಚಿಕಿತ್ಸಾ ಪ್ರಮಾಣ ಪತ್ರ
6) ಅಂಗನ್ಯೂನ್ಯತಾ ಪ್ರಮಾಣ ಪತ್ರ
7) ವೇತನ ಪ್ರಮಾಣ ಪತ್ರ
8) ಆಧಾರ್ ಕಾರ್ಡಿನ ನೋಟರಿ ಪ್ರತಿಯನ್ನು ಹಾಜರು ಮಾಡಿದ್ದೇನೆ.

ಸದರಿ ದಾಖಲೆಗಳನ್ನು ಕ್ರಮವಾಗಿ **ನಿ.ಪಿ - 1 ರಿಂದ 42** ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತೇನೆ.

<u>ಪಾಟೀ **ಸವಾಲು :**</u> 2ನೇ ಎದುರುದಾರ ವಿಮಾ ಕಂಪನಿಯ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**